

ಹೆಣ್ಣು ಮಕ್ಕಳ ವ್ಯಾನಿಟಿ ಬ್ಯಾಗ್ ಅರ್ಥಾತ್ ಜಂಭದ ಚೀಲದಲ್ಲಿ ಏನುಂಟು ಏನಿಲ್ಲ...? ಚಿಕ್ಕ ಹೇರ್ ಪಿನ್‌ನಿಂದ ಹಿಡಿದು ಮೇಕಪ್ ಕಿಟ್‌ವರೆಗೂ, ಚಾಕೊಲೇಟ್‌ನಿಂದ ಹಿಡಿದು ಟ್ಯಾಬ್ಲೆಟ್‌ವರೆಗೂ ಎಲ್ಲವನ್ನೂ ಈ ವ್ಯಾನಿಟಿ ಬ್ಯಾಗ್ ತನ್ನೊಡಲಿನಲ್ಲಿ ತುಂಬಿಕೊಂಡು ಇರುತ್ತದೆ. ಈಗಂತೂ ಬಗೆಬಗೆಯ ಬ್ಯಾಗ್‌ಗಳು ಟ್ರೆಂಡ್‌ನಲ್ಲಿವೆ. ಪಾರ್ಟಿ, ಆಫೀಸ್, ಫಂಕ್ಷನ್ ಹೀಗೆ ಒಂದೊಂದು ಜಾಗಕ್ಕೆ ಒಂದೊಂದು ವಿನ್ಯಾಸದ ಬ್ಯಾಗ್ ಹಿಡಿದುಕೊಂಡು ಹೋಗುವವರು ಇದ್ದಾರೆ. ಈಗ ಟ್ರೆಂಡ್‌ನಲ್ಲಿ ಬೋಹೊ ಹಾಗೂ ವಿಂಟೇಜ್ ಶೈಲಿಯ ಬ್ಯಾಗ್ ಗಳಿವೆ.

ಹಲವಾರು ಬಗೆಯ ಹ್ಯಾಂಡ್ ಬ್ಯಾಗ್‌ಗಳು ಈಗ ಮಾರುಕಟ್ಟೆಯಲ್ಲಿವೆ. ಲೆದರ್ ಬ್ಯಾಗ್, ಫರ್ ಫಿನಿಶಿಂಗ್ ಬ್ಯಾಗ್, ಕಾಟನ್ ಬ್ಯಾಗ್, ನೈಲಾನ್ ಸಿಂಥೆಟಿಕ್ ಮಿಕ್ಸ್ ಬ್ಯಾಗ್, ಜೀನ್ಸ್, ಡೆನಿಮ್ ಬ್ಯಾಗ್, ಕಲಂಕಾರಿ ಬ್ಯಾಗ್, ಖಾದಿ ಜೋಳಿಗೆ... ಹೀಗೆ ನಾನಾ ವಿಧದ ಬ್ಯಾಗ್‌ಗಳು ಮಹಿಳೆಯರ ತೋಳಿನಲ್ಲಿ ರಾರಾಜಿಸುತ್ತವೆ. ಹದಿಹರೆಯದ ಹುಡುಗಿಯರಿಂದ ಹಿಡಿದು ಮಧ್ಯ ವಯಸ್ಕ ಮಹಿಳೆಯರವರೆಗೆ ಈ ಬ್ಯಾಗ್‌ಗಳನ್ನು ಹೆಚ್ಚು ಇಷ್ಟಪಡುತ್ತಾರೆ. ಇನ್ನು ಫ್ಯಾಷನ್ ಐಕಾನ್‌ಗಳು, ಸೆಲೆಬ್ರಿಟಿಗಳು ಕೂಡ ಈ ಬ್ಯಾಗ್‌ನ ಮೋಹಿಗಳೆಂದೇ ಹೇಳಬಹುದು. ಯಾರ ಕೈಯಲ್ಲಾದರೂ ಒಂದು ಚೆಂದನೆಯ ಬ್ಯಾಗ್ ಇದ್ದರೆ ನಾವು ಕೂಡ ಇಂತಹದೊಂದು ಬ್ಯಾಗ್ ತೆಗೆದುಕೊಳ್ಳಬೇಕು ಎಂದು ಆಸೆ ಆಗುವುದು ಸಹಜ. ಈ ವ್ಯಾನಿಟಿ ಬ್ಯಾಗ್‌ಗಳು ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕ ಬೆಲೆಗೆ ಲಭ್ಯವಿದೆ. ಜೊತೆಗೆ ಸ್ವಲ್ಪ ಆನ್‌ಲೈನ್ ತಡಕಾಡಿದರೂ ವಿಭಿನ್ನ ವಿನ್ಯಾಸದ ಬ್ಯಾಗ್‌ಗಳನ್ನು ನಿಮ್ಮದಾಗಿಸಿಕೊಳ್ಳಬಹುದು.

ಇವೆಲ್ಲಕ್ಕೂ ಮೇಲ್ಪಂಕ್ತಿ ಹಾಕುತ್ತಿರುವುದು ಬೆಡಗಿನ ಬೋಹೊ ಬ್ಯಾಗ್. ಇದು ನಿಮ್ಮ ಲುಕ್ ಅನ್ನು ಇನ್ನಷ್ಟು ಸ್ಟೈಲಿಷ್ ಆಗಿ ಮಾಡಲು ಸಹಾಯ ಮಾಡುತ್ತದೆ. ಬೋಹೊದಲ್ಲೂ ಹಲವು ವೈವಿಧ್ಯಗಳಿವೆ.

**ಬ್ರೈಟ್ ಬೋಹೊ ಬ್ಯಾಗ್:** ಕೆಲವರಿಗೆ ಬಣ್ಣ ಬಣ್ಣದ ಬ್ಯಾಗ್‌ಗಳೆಂದರೆ ತುಂಬಾ ಇಷ್ಟ. ಅಂಥವರು ಬ್ರೈಟ್ ಕಲರ್ ಇರುವ ಬೋಹೊ ಬ್ಯಾಗ್‌ಗಳನ್ನು ಆಯ್ಕೆ ಮಾಡಿಕೊಳ್ಳುವುದು ಸೂಕ್ತ.

**ಬೊಹಿಮಿನ್ ರಾಪ್ ಸೋಡಿ:** ಈ ಮಲ್ಟಿಕಲರ್ ಬೊಹಿಮಿನ್ ಬ್ಯಾಗ್‌ಗಳು ನಿಮ್ಮ ಸ್ಟೈಲ್ ಅನ್ನು ಮತ್ತಷ್ಟು ಹೆಚ್ಚಿಸುತ್ತದೆ. ಇದರಲ್ಲಿ ಪ್ಯಾಚ್ ವರ್ಕ್ ಇರುತ್ತದೆ. ಹಾಗೇ ಎಂಬ್ರಾಯಿಡರಿ ಇರುತ್ತದೆ. ಹಾಗೇ ಕಾಲೇಜಿಗೆ ಹೋಗುವ ಹುಡುಗಿಯರು ಇದನ್ನು ಬಳಸಬಹುದು. ಕಾಲೇಜಿಗೆ ಸಂಬಂಧಪಟ್ಟ ವಸ್ತುಗಳನ್ನು ಇದರಲ್ಲಿ ಸುಲಭವಾಗಿ ಇಟ್ಟುಕೊಳ್ಳ ಬಹುದು. ಸ್ಟೈಲಿಷ್ ಲುಕ್ ಜೊತೆಗೆ ಕಂಫರ್ಟ್ ಕೂಡ ಇರುತ್ತದೆ.

**ಪಾಂ ಪಾಂ ಬೋಹೊ ಬ್ಯಾಗ್:** ಈ ಶೈಲಿಯ ಬೋಹೊ ಬ್ಯಾಗ್ ಹೆಚ್ಚಾಗಿ ಎಲ್ಲಾ ಔಟ್ ಫಿಟ್‌ಗೂ ಚೆನ್ನಾಗಿ ಹೊಂದುತ್ತದೆ.

**ಕಲರ್ ಬಾಂಬ್:** ಇನ್ನು ಬಣ್ಣ ಬಣ್ಣದ ಬ್ಯಾಗ್ ಇಷ್ಟಪಡುವವರಿಗೆ ಈ ತರಹದ ಬೋಹೊ ಬ್ಯಾಗ್‌ಗಳು ಸಖತ್ ಇಷ್ಟವಾಗುತ್ತದೆ. ಇದರಲ್ಲಿನ ಪ್ರಿಂಟ್, ಟಸೆಲ್ಸ್ ಎಲ್ಲವೂ ನೋಡುವುದಕ್ಕೆ ಸುಂದರವಾಗಿರುತ್ತದೆ. ಹಾಗೇ ಬೆಲೆ ಕೂಡ ಕೈಗೆಟುಕುವ ದರದಲ್ಲಿರುತ್ತದೆ.

**ಬೇಸಿಕ್ ಟೋಟ್:** ಇನ್ನು ಈ ತರಹದ ಬ್ಯಾಗ್‌ಗಳು ಕಾಲೇಜು ಹುಡುಗಿಯರು ಇಷ್ಟಪಡುತ್ತಾರೆ. ಇದು ಅವರಿಗೆ ಕಂಫರ್ಟ್ ಆಗಿರುತ್ತದೆ. ಹಾಗೇ ನೋಡುವುದಕ್ಕೆ ಚೆನ್ನಾಗಿರುತ್ತದೆ.

**ಬ್ಯಾಗ್ ಪ್ಯಾಕ್ಸ್:** ಬೊಹೊ ಬ್ಯಾಗ್ ಪ್ಯಾಕ್ಸ್‌ಗಳು ಕೂಡ ಅಷ್ಟೇ ಸುಂದರವಾಗಿರುತ್ತದೆ. ಕಾಲೇಜು ಹುಡುಗಿಯರಿಗೂ ಇದು ಚೆನ್ನಾಗಿ ಹೊಂದುತ್ತದೆ. ಹಾಗೇ ಪಿಕ್‌ನಿಕ್, ಟ್ರೆಕ್ಕಿಂಗ್ ಹೋಗುವವರಿಗೂ ಆರಾಮದಾಯಕವಾಗಿರುತ್ತದೆ. ಸ್ಟೈಲಿಷ್ ಆಗಿಯೂ ಕಾಣಿಸುತ್ತದೆ.



**ಫ್ರಿಂಜ್:** ಈ ತರಹದ ಬ್ಯಾಗ್‌ಗಳು ನೋಡುವುದಕ್ಕೆ ಚೆಂದವಾಗಿರುವುದರ ಜೊತೆಗೆ ಬ್ಯಾಗ್‌ನಲ್ಲಿ ಎಲ್ಲಾ ವಸ್ತುಗಳನ್ನು ಇಷ್ಟುಕೊಳ್ಳುವಷ್ಟು ಜಾಗವಿರುತ್ತದೆ. ಹಾಗೇ ಇದು ಸ್ಟೈಲಿಷ್ ಕೂಡ ಆಗಿದೆ. ಇದೊಂದು ನಿಮ್ಮ ವಾರ್ಡ್ ರೋಬ್‌ನಲ್ಲಿರುವುದು ಒಳ್ಳೆಯದು.

**ಟ್ರೆಡಿಷನಲ್ ಸ್ಟೈಲ್:** ಇನ್ನು ಮಿರರ್ ವರ್ಕ್ ಹಾಗೂ ಪ್ರಿಂಟ್ ಡಿಟೈಲಿಂಗ್ ಇರುವ ಈ ಬೊಹೊ ಬ್ಯಾಗ್‌ಗಳು ಇತರ ಎಲ್ಲ ಆಕ್ಸೆಸರೀಸ್ ಜೊತೆಗೆ ಹೊಂದಿಕೊಳ್ಳುತ್ತದೆ.

**ಬಿಜ್ ಬ್ಯಾಗ್:** ಇನ್ನು ಫ್ರಿಂಜ್ ಹಾಗೂ ಟೈ ಅಪ್ ಡಿಟೈಲ್ಸ್ ಇರುವ ಈ ಬಿಜ್ ಬ್ಯಾಗ್‌ಗಳು ಕೂಡ ಇಂದಿನ ಫ್ಯಾಷನ್ ಟ್ರೆಂಡ್. ಇದು ಪಾರ್ಟಿಗಳಿಗೆ ಹೋಗುವಾಗ ಹೇಳಿ ಮಾಡಿಸಿದ್ದು.

**ಪ್ರಿಂಟ್ ಲುಕ್:** ಕಾಲೇಜು ಹುಡುಗಿಯರು ಹೆಚ್ಚಾಗಿ ಪ್ರಿಂಟ್ ಲುಕ್ ಇರುವ ಬ್ಯಾಗ್‌ಗಳನ್ನು ಇಷ್ಟಪಡುತ್ತಾರೆ. ಇದು ಅವರಿಗೆ ಹೆಚ್ಚು ಸರಿಹೊಂದುತ್ತದೆ. ಇನ್ನು ಕೆಲವೊಂದು ಫಂಕ್ಷನ್‌ಗೆ ಹೋಗುವಾಗ ಕೂಡ ಇದನ್ನು ಬಳಸಬಹುದು.

**ಬ್ಯಾಂಬು ಬ್ಯಾಗ್:** ಬಿದಿರಿನಿಂದ ತಯಾರಿಸಿದ ಹ್ಯಾಂಡ್‌ಬ್ಯಾಗ್ ಕೂಡ ಯುವತಿಯರ ಮೆಚ್ಚು.

**ಜನಿನಾ ಬ್ಯಾಗ್:** ಇದು ದಿನನಿತ್ಯ ಬಳಸಲು ಸೂಕ್ತ. ಇದರಲ್ಲಿ ಡಿಟ್ಯಾಚೆಬಲ್ ಕ್ರಾಸ್ ಬಾಡಿ ಸ್ಟ್ರಾಪ್, ಎರಡು ವೃತ್ತಾಕಾರದ ಹ್ಯಾಂಡಲ್‌ಗಳು, ಜಿಪರ್ಡ್ ಟಾಪ್ ಇದೆ. ಇದು ಸ್ಟೈಲಿಷ್ ಆಗಿದೆ. ಹಾಗೇ ನಿಮ್ಮ ಎಲ್ಲಾ ಔಟ್‌ಫಿಟ್‌ಗೂ ಇದು ಚೆನ್ನಾಗಿ ಹೊಂದುತ್ತದೆ. ಹಾಗೇ ಇದರಲ್ಲಿರುವ ಟ್ರೈಬಲ್ ಲೇಸ್ ವರ್ಕ್ ಕೂಡ ಚೆನ್ನಾಗಿರುತ್ತದೆ.

**ಆಶರ್:** ಇನ್ನು ನಿಮಗೆ ವ್ಯಾನಿಟಿ ಬ್ಯಾಗ್‌ನಲ್ಲಿ ಜಾಗ ಹೆಚ್ಚು ಬೇಕು ಅನ್ನುವ ಹಾಗಿದ್ದರೆ ಈ ಆಶರ್ ಒಳ್ಳೆಯ ಆಯ್ಕೆ. ಗಾತ್ರ ಕೂಡ ತುಂಬಾ ದೊಡ್ಡದು ಜೊತೆಗೆ ಡಬ್ಬಲ್ ಲೇಸ್ಡ್ ಡಿಟೈಲಿಂಗ್ ಇದೆ. ಪರಿಪೂರ್ಣವಾದ ಬೋಹಿಮಿಯನ್ ಲುಕ್‌ಗಾಗಿ ಹೊರಭಾಗದಲ್ಲಿ ಇಕ್ವಸ್ಟ್ರಿಯನ್ ರಿಂಗ್ ಟ್ಯಾಬ್ ಕೂಡ ಇದೆ. ನಿಮ್ಮ ಅಗತ್ಯದ ವಸ್ತುಗಳನ್ನು ಇಟ್ಟುಕೊಳ್ಳಲು ಸಾಕಷ್ಟು ಜಾಗವಿದೆ ಈ ಬ್ಯಾಗ್‌ನಲ್ಲಿ.

**ಕ್ಲಿಯೊ:** ಈ ಬ್ಯಾಗ್‌ಗಳು ವೀಕೆಂಡ್ ಪಾರ್ಟಿಗಳಿಗೆ ಹೋಗುವವರಿಗೆ ಹೆಚ್ಚು ಕಂಫರ್ಟ್ ಆಗಿರುತ್ತದೆ. ನಿಮ್ಮ ಫೋನ್, ವ್ಯಾಲೆಟ್, ಕೀ, ಮಾಸ್ಕ್ ಇಂತಹ ಅಗತ್ಯ ವಸ್ತುಗಳನ್ನು ಇಟ್ಟುಕೊಳ್ಳಬಹುದು. ಆರು ಬಣ್ಣಗಳಲ್ಲಿ ಈ ಬ್ಯಾಗ್ ಲಭ್ಯವಿದೆ.

**ಲಿಯೋರಾ ಬ್ಯಾಗ್:** ಡಬ್ಬಲ್ ರೋ ಸ್ಟಡ್ ಡಿಟೈಲ್, ಇಕ್ವೆಸ್ಟಿನ್ ರಿಂಗ್ ಟ್ಯಾಬ್ ಹಾಗೂ ಟಸೆಲ್ ಪುಲ್‌ನೊಂದಿಗೆ ಬಕೆಟ್ ಶೈಲಿಯಲ್ಲಿರುವ ಈ ಬ್ಯಾಗ್‌ಗಳನ್ನು ದಿನ ನಿತ್ಯ ಬಳಸಲು ಚೆನ್ನಾಗಿರುತ್ತದೆ.

ನಿಮ್ಮ ಎಲ್ಲಾ ಔಟ್ ಫಿಟ್‌ಗೂ ಮ್ಯಾಚ್ ಆಗುವ ರೀತಿ ಇರುವ ವಿಭಿನ್ನ ವಿನ್ಯಾಸದ ಈ ಬ್ಯಾಗ್‌ಗಳು ನೋಡುವುದಕ್ಕೆ ಸುಂದರವಾಗಿರುತ್ತದೆ. ■